(ಆ) ರಾಜ್ಯದಲ್ಲಿ ಅಭಾವ ಪೀಡಿತ ಪ್ರದೇಶಗಳಲ್ಲಿ ಹಳ್ಳಿಯ ರೈತರು ನೀರಾವರಿ ಸೌಲಭ್ಯವನ್ನು ಪಡೆದುಕೊಳ್ಳಲು ನೀರಾವರಿ ಭಾವಿ ಹಾಗೂ ನೀರಾವರಿ ಕೊಳವೆ ಭಾವಿಗಳನ್ನು ತೋಡುತ್ತಿರುವುದರಿಂದ ಅವುಗಳಿಗೆ ಬೇಕಾಗುವ ವಿದ್ಯುತ್ತು ಪೂರೈಕೆಯ ಸಲುವಾಗಿ ಮುಂಜಾಗ್ರತವಾಗಿ ಸರ್ಕಾರದವರು ಕೈಗೊಂಡ ಕ್ರಮಗಳು ಯಾವುವು.

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

(ಆ) ರಾಜ್ಯದಲ್ಲಿ ೩೧ ಆಕ್ಟೋಬರ್ ೧೯೮೫ರಲ್ಲಿ ಮುಂಡಳಿಯಲ್ಲಿ ನೊಂದಾಯಿಸಲ್ಪಟ್ಟಿರುವ ಅರ್ಜಿಗಳ ಪೈಕಿ ೩೫೫೭೦ ಭಾವಿಗಳಿಗೆ (ಕೊಳವೆ ಭಾವಿಗಳೂ ಸೇರಿ) ವಿದ್ಯುತ್ ಸರಬರಾಜು ಮಾಡ ಬೇಕಾಗಿದೆ, ಇವುಗಳು ವಿವಿಧ ಹಂತದಲ್ಲಿವೆ.

(ಆ) ರಾಜ್ಯದಲ್ಲಿ ಮಳೆ ವಿಫಲವಾದ ಕಾರಣ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಬೇಡಿಕೆ ಹೆಚ್ಚಾಗಿದೆ. ಮಂಡಳಿಯು ಆರ್ಥಿಕ ಸಂಪನ್ಮೂಲಕ್ಕನುಗುಣವಾಗಿ ಗಂರಿ ಹಾಕಿಕೊಂಡು ವಿದ್ಯುದ್ದೀಕರಣಕ್ಕೆ ಬೇಕಾಗುವ ಸಾಮಾನ್ಯಗಳನ್ನು ಖರೀದಿಸಂತ್ತಿದೆ. ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವಲ್ಲಿ ಸಾಧ್ಯವಾದಷ್ಟು ಹೆಚ್ಚು ಅನ್ಯತೆ ತೋರಿಸಿ ಪ್ರಗತಿ ಸಾಧಿಸಲಾಗಿದೆ. ನೊಂದಾಯಿಸಲ್ಪಟ್ಟ ಎಲ್ಲಾ ಅರ್ಜಿಗಳ ಪ್ರಕರಣಗಳಲ್ಲೂ ಮುಂದಿನ ಕ್ರಮ ಶೀಘ್ರವಾಗಿ ತೆಗೆದುಂ ಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ತುಂಡು ಭೂಮಿ ನೊಂದಾಯಿಸುವ ಬಗ್ಗೆ

೧೪೮. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ತುಂಡು ಭೂಮಿ ನೋಂದಾಯಿಸುವ ಬಗ್ಗೆ ಕಾನೂನು ಮಾಡುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಆ) ರಾಜ್ಯದಲ್ಲಿ ಜಂಟೀ ಕುಟುಂಬ ವಿಭಾಗವಾದ ನಂತರ ತುಂಡು ಭೂಮಿ ನೋಂದಣಿ ಆಗದೇ ಇರುವುದರಿಂದ, ನೋಂದಣಿ ಆಗದೆ ಉಳಿದಿರುವ ಪ್ರಕರಣಗಳೆಷ್ಟು ?

ಇ) ಆ ಪೈಕಿ ಚಿಕ್ಕಮಗಳೂರಿನ ಜಿಲ್ಲೆಯಲ್ಲಿ ಸದರಿ ಪ್ರಕರಣಗಳ ಸಂಖ್ಯೆ ಎಷ್ಟು ?

ಶ್ರೀ ಎಸ್.ಆರ್. ಬೋಮ್ಮಾಯಿ.—ಕಂದಾಯ ಹಾಗೂ ಯೋಜನಾ ಸಚಿವರು.

ಅ) ಇಂತಹ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿ ಇಲ್ಲ.

ಆ) ಕರ್ನಾಟಕ ತುಂಡು ಭೂಮಿ ಹಾಗೂ ಕ್ರೋಢೀಕರಣ ಕಾನೂನು ವಿರುದ್ಧವಾಗಿ, ದಸ್ತಾವೇಜುಗಳನ್ನು ನೊಂದಾಯಿಸಬಾರದೆಂದು ಈಗಾಗಲೇ ಆದೇಶವಿರುವುದರಿಂದ, ಹಾಗೂ ಅಂತಹ ದಸ್ತಾವೇಜುಗಳು ನೋಂದಣಿ ಆಗದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) (ಅ)ಗೇ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿನ ಬರಗಾಲದ ಬವಣೆಯನ್ನು ಸುಧಾರಿಸುವ ಬಗ್ಗೆ

೧೮೦. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎದುರಾಗಿರುವ ತೀವ್ರ ಬರಗಾಲದ ಬವಣೆ ಎದುರಿಸಲು ಸರಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಆ) ಚಿತ್ರದುರ್ಗ ಜಿಲ್ಲೆಯ ಹಳ್ಳಿಗಳಿಗೆ ಹುಲ್ಲು ಸರಬರಾಜು ಮಾಡಲು ಸರಕಾರದವರು ಏನ್ನ ಕ್ರಮ ಕೈಗೊಂಡಿದ್ದಾರೆ.

ಇ) ಹಾಗಿದ್ದಲ್ಲಿ ಇದುವರೆಗೆ ಈ ಸಾಲಿನಲ್ಲಿ ಹೊಸದುರ್ಗ ತಾಲ್ಲೂಕಿಗೆ ಎಷ್ಟು ಪ್ರಮಾಣದಲ್ಲಿ ಹುಲ್ಲು ಸರಬರಾಜು ಮಾಡಲಾಗಿದೆ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಸಚಿವರು).

ಅ) ರಾಜ್ಯದಲ್ಲಿ ಎದುರಾಗಿರುವ ತೀವ್ರ ಬರಗಾಲವನ್ನು ಎದುರಿಸಲು ರಾಜ್ಯ ಸರ್ಕಾರ ಈ ಕೆಳಕಂಡ ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ.

೧ ಕೆಲಸ ಬೇಕಾದವರಿಗೆ ಉದ್ಯೋಗ ನೀಡುವುದು.

೨ ಜನರಿಗೆವಂತ್ತು ಜಾನುವಾರುಗಳಿಗೆ ಕುಡಿಯುವ ನೀರನ್ನು ಸಾಗಿಸಿ ಸರಬರಾಜು ಮಾಡುವುದು

೩ ಕೊಳವೆ ಬಾವಿಗಳನ್ನು ತೆಗೆಯುವುದು

೪ ಜಾನುವಾರುಗಳಿಗೆ ಮೇವನ್ನು ಒದಗಿಸುವುದು

೫ ಅಭಾವ ಪರಿಹಾರ ಕಾಮಗಾರಿಗಳಲ್ಲಿ ಕೆಲಸ ಮಾಡುವ ಜನರಿಗೆ ಆಹಾರಧಾನ್ಯಗಳನ್ನು ರಿಯಾಯಿತಿ ದರದ ಮೇಲೆ ವಿತರಣೆ ಮಾಡುವುದು

ಆ) ಚಿತ್ರದುರ್ಗ ಜಿಲ್ಲೆಯ ಹಳ್ಳಿಗಳಿಗೆ ಹುಲ್ಲು ಸರಬರಾಜು ಮಾಡಲು ಸರಕಾರ ೧೩ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದು ೨.೮೦ ಲಕ್ಷ ರೂಪಾಯಿಗಳು ಖರ್ಚಾಗಿದೆ. ಮತ್ತು ೨೫೬ ಲಾರಿ ಹುಲ್ಲನ್ನು ಜಿಲ್ಲೆಯಲ್ಲಿ ವಿವಿಧ ಭಾಗಗಳಿಗೆ ಸಾಗಿಸಲಾಗಿದೆ.

೨ ೧೭೭೧.೧೦ ಎಕರೆ ಜಮೀನಿನಲ್ಲಿ ಮೇವು ಬೆಳೆಯುವ ಉದ್ದೇಶಕ್ಕಾಗಿ ೪.೧೮ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದ್ದು ಇನ್ನು ೩ ತಿಂಗಳೊಳಗಾಗಿ ೬೫೦೦ ಮೆಟ್ರಿಕ್ ಟನ್ ಹಸಿರು ಮೇವು ಅಥವಾ ೨೧೫೦ ಮೆಟ್ರಿಕ್ ಟನ್ ಒಣ ಮೇವು ಬೆಳೆಯನ್ನು ನಿರೀಕ್ಷಿಸಲಾಗಿದೆ.

೩ ನೀರಾವರಿ ಕೆಳಗೆ ಮೇವು ಬೆಳೆಯಲು ರೈತರಿಗೆ ಬೀಜ ಗೊಬ್ಬರ, ಸಾಲ ಒದಗಿಸಲಾಗಿದೆ.

೪ ಪರ ರಾಜ್ಯಗಳಿಂದ ಮೇವು ತರಿಸಿ ರಾಜ್ಯದಲ್ಲಿ ಅವಶ್ಯಕತೆಯಿದ್ದ ಜಿಲ್ಲೆಗಳಿಗೆ (ಚಿತ್ರದುರ್ಗವೂ ಸೇರಿದಂತೆ) ಪೂರೈಸುವ ವ್ಯವಸ್ಥೆ ಮಾಡಲಾಗಿದೆ.

ಇದರ ಜೊತೆಗೆ ಜಿಲ್ಲೆಯಲ್ಲಿ ೪ ಮೇವು ಕೇಂದ್ರಗಳನ್ನು ತೆರೆದು ಇದುವರೆಗೆ ೫೦೦ ಟನ್ ಮೇವನ್ನು ಸಂಗ್ರಹಿಸಿದ್ದು ಮತ್ತು ೪ ಗೋಶಾಲೆಗಳಲ್ಲಿ ಒಟ್ಟು ೨೫೦೦ ಪಶುಗಳನ್ನು ಸಾಕಲಾಗುತ್ತಿದೆ.

ಇ) ದಿನಾಂಕ ೧-೪-೮೫ ರಿಂದ ಇದುವರೆಗೆ ಹೊಸದುರ್ಗ ತಾಲ್ಲೂಕಿನಲ್ಲಿ ೦.೦೫ ಲಕ್ಷ ರೂಪಾಯಿಗಳ ಖರ್ಚಿನಿಂದ ೮ ಲಾರಿ ಮೇವನ್ನು ಸಾಗಿಸಲಾಗಿದೆ.

ಹೊಸದುರ್ಗ ತಾಲ್ಲೂಕಿನಲ್ಲಿ ೧೦೨.೨೦ ಎಕರೆ ಪ್ರದೇಶದಲ್ಲಿ ಮೇವು ಬೆಳೆಯುವ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಚೆನ್ನಗಿರಿ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿಂತ್ತಿರುವ ಬಗ್ಗೆ.

೮೦. ಶ್ರೀಮತಿ ಶಕುಂತಲಾ ತುಕಾರಾಮ್ ಚೌಗುಲೆ (ಚಿಕ್ಕೋಡಿ).—ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚೆನ್ನಗಿರಿ ತಾಲ್ಲೂಕಿನಾದ್ಯಂತ ಸಾವಿರಾರು ಕುಟುಂಬಗಳು ಬಗರ್‌ಹುಕುಂ ಸಾಗುವಳಿ ಮಾಡುತ್ತಾ ಬಂದಿದ್ದರೂ ಅವರಿಗೆ ಸಾಗುವಳಿ ಚೀಟಿಯನ್ನು ಕೊಡದೇ ಅವನ್ನೆಲ್ಲಾ ಹೊರಗೆ ಹಾಕುವ ಪ್ರಯತ್ನ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಯಾವ ಕ್ರಮ ತೆಗೆದುಕೊಳ್ಳಲಾಗಿದೆ.

ಇ) ದಲಿತರು ಮತ್ತು ಭೂಹೀನ ಬಡವರಿಗೆ ಬಗರ್‌ಹುಕುಂ ಜಮೀನಿನ ಬಗ್ಗೆ ಕರ್ನಾಟಕ ಭೂಮಂಜೂರಾತಿ ಕಾಯ್ದೆಯನ್ನು ತಿದ್ದುಪಡಿ ಮಾಡಲು ತೀರ್ಮಾನಿಸಿದೆಯೆ ?